ಹೆಚ್ಚುವರಿ ದಿವಾಣಿ & ಜೆ.ಎಮ್.ಎಫ್.ಸಿ. ನ್ಯಾಯಾಲಯ, ಜಮಖಂಡಿ
ಇವರ ನ್ಯಾಯಾಲಯದಲ್ಲಿ,

ಸಿ.ಸಿ.ನಂ.431/2020
ಸಿ.ಡಬ್ಲ್ಯು-6 ಪಿ.ಡಬ್ಲ್ಯು-4

| | | |
|---|---|---|
| ಸಾಕ್ಷಿದಾರರ ಹೆಸರು | : | ಪ್ರಭುಗೌಡ ಚನ್ನಪ್ಪಗೌಡ ಹಿರೆಕೆಂಚನಗೌಡರ |
| ವಯಸ್ಸು | : | 34 ವರ್ಷ |
| ಉದ್ಯೋಗ | : | ಸಂಚಾರಿ ಪೇದೆ, ಬಾಗಲಕೋಟೆ |
| ವಾಸಸ್ಥಳ | : | ಬಾಗಲಕೋಟೆ |

ದಿನಾಂಕ: 27.02.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೊದಿಸಲಾಯಿತು.
<u>ಮುಖ್ಯವಿಚಾರಣೆ: ಶ್ರೀ. ಸ.ಸ.ಅ ರವರಿಂದ.</u>

2019 ರಿಂದ 2021 ರವರೆಗೆ ನಾನು ಬಿ.ಸಿ.ಐ.ಬಿ. ಘಟಕದಲ್ಲಿ ಪೊಲೀಸ್ ಪೇದೆ ಅಂತ ಕರ್ತವ್ಯ ನಿರ್ವಹಿಸುತ್ತಿದ್ದೆ. ದಿ: 19.11.2019 ರಂದು ಸಾಯಂಕಾಲ 7 ಗಂಟೆಗೆ ಚಾಸಾ-1 ರವರು ನನ್ನನ್ನು ಮತ್ತು ಚಾಸಾ-7 & 8 ರವರನ್ನು ಕರೆದು ಅಕ್ರಮ ಚಟುವಟಿಕೆಗಳ ಬಗ್ಗೆ ಗಸ್ತು ತಿರುಗುವುದಿದೆ ಅಂತ ತಿಳಿಸಿದ್ದು, ಅದರಂತೆ ನಾವು ಜಮಖಂಡಿ ನಗರಕ್ಕೆ ಬಂದಿದ್ದು, ಸಂಜೆ 7-15 ಗಂಟೆಗೆ ಮರೆಗುದ್ದಿ ಗ್ರಾಮದ ಜಮೀನಿನಲ್ಲಿ ಅಕ್ರಮವಾಗಿ ಎರಡು ಟಿಪ್ಪರಗಳಲ್ಲಿ ಮರಳು ಸಾಗಾಣಿಕೆ ಮಾಡುತ್ತಿದ್ದಾರೆಂದು ಬಾತ್ಮಿ ಬಂದಿದ್ದು, ಸದರಿ ವಿಷಯವನ್ನು ನಮಗೆ ತಿಳಿಸಿದ್ದು, ನಂತರ ನಾವು ಅಲ್ಲಿಂದ ಜಮಖಂಡಿ ಗ್ರಾಮೀಣ ಪೊಲೀಸ್ ಠಾಣೆಗೆ ಹೋಗಿ ಚಾಸಾ-4 ರವರಿಗೆ ಮಾಹಿತಿ ತಿಳಿಸಿದ್ದು, ಅಲ್ಲಿಯೇ ಇಬ್ಬರು ಪಂಚರನ್ನು ಬರಮಾಡಿಕೊಂಡು ಅವರಿಗೂ ವಿಷಯ ತಿಳಿಸಿದ್ದು, ಅವರು ಪಂಚರಾಗಲು ಒಪ್ಪಿದ್ದರಿಂದ ನಾವೆಲ್ಲರೂ ಘಟನಾ ಸ್ಥಳದ ಹತ್ತಿ 8-25 ನಿಮಿಷಕ್ಕೆ ಹೋಗಿ ಮರೆಯಲ್ಲಿ ನಿಂತು ವಾಚ್ ಮಾಡಲಾಗಿ ಅಲ್ಲಿ ಎರಡು ಟಿಪ್ಪರಗಳು ಮರಳು ತುಂಬಿಕೊಂಡು ಜಮಖಂಡಿ ಕಡೆಗೆ ಮುಖ ಮಾಡಿ ರಸ್ತೆಯ ಮೇಲೆ ನಿಂತಿದ್ದವು. ನಂತರ ನಾವು ಸದರಿ ಟಿಪ್ಪರ ಚಾಲಕರನ್ನು ವಿಚಾರಿಸಲಾಗಿ ಜಗದೀಶ ಗುರುಬಸಯ್ಯ ಮಠಪತಿ ಅಂತ ಮತ್ತು ಇನ್ನೊಬ್ಬ ಚಾಲಕ ಶಿವಾನಂದ ಮಲ್ಲಪ್ಪ ಸಿದ್ದಗೊಂಡ ಅಂತ ತಿಳಿಸಿದ್ದು, ಜಗದೀಶ ಇವರು ಸದರಿ ಟಿಪ್ಪರ ಮಾಲೀಕರು ಮತ್ತು ಚಾಲಕರು ಅಂತ ತಿಳಿಸಿದ್ದು, ನಂತರ ಶಿವಾನಂದ ಈತನು ಆತ ನಡೆಸುತ್ತಿದ್ದ ಟಿಪ್ಪರ ಮಾಲೀಕರ ಹೆಸರು ಯಲ್ಲಪ್ಪ ಮಲ್ಲಪ್ಪ ಹೆಳವರ ಅಂತ ತಿಳಿಸಿದನು. ಎರಡು ಟಿಪ್ಪರಗಳಲ್ಲಿ ತಲಾ 3 ಬ್ರಾಸನಷ್ಟು ಮರಳು ಇತ್ತು. ಸದರಿ ಮರಳು ಸಾಗಾಣಿಕೆಗೆ ಪರವಾನಿಗೆ ಇಲ್ಲವೆಂದು ತಿಳಿಸಿದ್ದು, ನಂತರ ಸದರಿ ವ್ಯಕ್ತಿಗಳನ್ನು ಮತ್ತು ಲಾರಿಯನ್ನು ಅಮಾನತ್ತುಪಡಿಸಿಕೊಂಡು ಪಂಚರ ಸಮಕ್ಷಮ ಸ್ಥಳದಲ್ಲಿಯೇ ಪಂಚನಾಮೆ ಮಾಡಿರುತ್ತಾರೆ. ಪ್ರತಿ ಟಿಪ್ಪರಗಳಿಂದ ತಲಾ ಒಂದೊಂದು ಕೆ.ಜಿ ಮತ್ತು ಜಾಗದಿಂದ ಒಂದು ಕೆ.ಜಿ. ಮರಳನ್ನು ರಾಸಾಯನಿಕ ಪರೀಕ್ಷೆ ಕುರಿತು ಪ್ರತ್ಯೇಕ ತೆಗೆದು ಅದಕ್ಕೆ ಪಂಚರು ಸಹಿ ಮಾಡಿದ ಚೀಟಿಯನ್ನು ಅಂಟಿಸಲಾಯಿತು. ಸದರಿ ಪಂಚನಾಮೆಯನ್ನು ರಾತ್ರಿ 8-30 ರಿಂದ 10-30 ರವರೆಗೆ ಮಾಡಿರುತ್ತಾರೆ. ನಂತರ ಚಾಸಾ-1

ರವರು ಮುಂದಿನ ಕ್ರಮ ಜರುಗಿಸಿರುತ್ತಾರೆ. ನಾನು ಈ ಬಗ್ಗೆ ನಮ್ಮ ಮೇಲಾಧಿಕಾರಿಗಳಿಗೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯನ್ನು ನೋಡಿ ಗುರುತಿಸುತ್ತಾರೆ. 3 ನೇ ಆರೋಪಿ ಗೈರು ಹಾಜರು ಇದ್ದು, ಆತನ ಗುರುತಿಸುವಿಕೆಯ ಬಗ್ಗೆ ತಕರಾರು ಇಲ್ಲವೆಂದು ಆತನ ಪರ ವಕೀಲರು ತಿಳಿಸುತ್ತಾರೆ. ಸಾಕ್ಷಿ ಟಿಪ್ಪರ ಇರುವ ಪೊಟೊಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-2 ರಿಂದ 9 ಅಂತ ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ ಶ್ಯಾಂಪಲ ಮರಳನ್ನು ನೋಡಿ ಗುರುತಿಸುತ್ತಾರೆ ಅವುಗಳನ್ನು ಮುಮಾ-1 ರಿಂದ 3 ಅಂತ ಗುರುತಿಸಲಾಯಿತು.

ಪಾಟಿಸವಾಲು: ಶ್ರೀ. ಎಮ್.ಎಮ್.ಡಿ.ವಕೀಲರಿಂದ **1** ನೇ ಆರೋಪಿ ಪರವಾಗಿ

ನಾವು ಆರ್.ಟಿ.ಓ. ಕಚೇರಿಯ ಹತ್ತಿರ ಹೋಗುತ್ತಿದ್ದಾಗ ಬಾತ್ಮಿ ಬಂದಿದೆ. ಆರ್.ಟಿ.ಓ. ಕಚೇರಿಯಿಂದ ಅಂದಾಜು 2-3 ಕಿ.ಮೀ. ದೂರದಲ್ಲಿದ್ದೇವು ಎಂದರೆ ಸರಿ. ಘಟನಾ ಸ್ಥಳ ಜಮಖಂಡಿಯಿಂದ ಅಂದಾಜು 15 ಕಿ.ಮೀ. ಅಂತರದಲ್ಲಿದೆ. ಆರ್.ಟಿ.ಓ. ಕಚೇರಿಯಿಂದ ಅರ್ಧ ಕಿ.ಮೀ. ಅಂತರದಲ್ಲಿ ಮರೆಗುದ್ದಿ ಗ್ರಾಮಕ್ಕೆ ಹೋಗುವ ರಸ್ತೆ ಇದೆ ಎಂದರೆ ಸರಿ. ನಾವು ಆ ದಿನ ಕೆಎ-29/ಜಿ-3508 ನೇದ್ದರಲ್ಲಿ ಗಸ್ತು ತಿರುಗುತ್ತಿದ್ದೇವು. ಚಾಸಾ-4 ರವರು ಅವರ ಜೀಪ್‌ನ ನಂ. ಕೆಎ-02/523 ನೇದ್ದರಲ್ಲಿ ಪಂಚರನ್ನು ಕರೆದುಕೊಂಡು ಬಂದಿರುತ್ತಾರೆ. ಘಟನಾ ಸ್ಥಳದ 200 ಮೀಟರ್‌ನಲ್ಲಿ 5 ನಿಮಿಷ ನಿಂತು ವಾಚ್ ಮಾಡಿರುತ್ತೇನೆ. ಆಗ ಕತ್ತಲಾಗಿತ್ತು ಎಂದರೆ ಸರಿ. ಆದ್ದರಿಂದ ನಮಗೆ ಘಟನಾ ಸ್ಥಳ ಕಾಣಿಸುವುದಿಲ್ಲ ಎಂದರೆ ಸರಿಯಲ್ಲ. ಹಾಗೆಂದು ಸುಳ್ಳು ನುಡಿಯುತ್ತಿದ್ದೇನೆಂದರೆಸ ರಿಯಲ್ಲ. ಲೈಟ್ ಬೆಳಕಿನಲ್ಲಿ ನೋಡಿರುತ್ತೇವೆ. ಮುಮಾ-1 ರಿಂದ 3 ರ ಮರಳು ಎಲ್ಲಾ ಕಡೆ ಸಿಗುತ್ತದೆ ಎಂದರೆ ಸರಿ. ದಿ: 19.11.2019 ರಂದು ಸಾಯಂಕಾಲ 7 ಗಂಟೆಗೆ ಚಾಸಾ-1 ರವರು ನನ್ನನ್ನು ಮತ್ತು ಚಾಸಾ-7 & 8 ರವರನ್ನು ಕರೆದು ಅಕ್ರಮ ಚಟುವಟಿಕೆಗಳ ಬಗ್ಗೆ ಗಸ್ತು ತಿರುಗುವುದಿದೆ ಅಂತ ತಿಳಿಸಿಲ್ಲ, ನಾವು ಜಮಖಂಡಿ ನಗರಕ್ಕೆ ಬಂದಿಲ್ಲ, ನಮಗೆ ಯಾವುದೇ ಬಾತ್ಮಿ ಬಂದಿಲ್ಲ, ನಾವು ಗ್ರಾಮೀಣ ಪೊಲೀಸರೊಂದಿಗೆ ಘಟನಾ ಸ್ಥಳಕ್ಕೆ ಹೋಗಿಲ್ಲ, ಅಲ್ಲಿ ಯಾವುದೇ ಟಿಪ್ಪರಗಳು ಇರಲಿಲ್ಲ, ಅವುಗಳನ್ನು ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡಿಲ್ಲ, ಅವುಗಳಲ್ಲಿ ಮರಳು ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ತಪ್ಪು ಮಾಡದೇ ಇದ್ದರೂ ಕೂಡ ನಮ್ಮ ಮೇಲಾಧಿಕಾರಿಗಳು ಅಂಕಿ-ಸಂಖ್ಯೆಗೊಸ್ಕರ ಅವರ ವಿರುದ್ದ ಪ್ರಕರಣ ದಾಖಲಿಸಿದ್ದು, ಅದಕ್ಕೆ ಪೂರಕವಾಗಿ ಸುಳ್ಳು ಹೇಳಿಕೆ ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ: ಇಲ್ಲ.

[ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.]

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ದಿವಾಣಿ ನ್ಯಾಯಾಧೀಶರು,

ಜಮಖಂಡಿ.